ಶ್ರೀ ಜೆ. ಆರ್. ಹಾಲಸ್ವಾಮಿ.—ಮೊದಲನೆಯ ಪ್ರಶ್ನೆಗೆ ಉತ್ತರವಾಗಿ 26 ಎಂದು ಹೇಳಿದ್ದೀರಿ, ಅದರಲ್ಲಿ ದೊಡ್ಡ ಕೆರೆಗಳು ಎಷ್ಟು ಸಣ್ಣ ಕೆರೆಗಳು ಎಷ್ಟು ?

† ಶ್ರೀಮತಿ ಬನವರಾಜೇಶ್ವರಿ.—ದೊಡ್ಡ ಕೆರೆಗಳು 8 ಸಣ್ಣ ಕೆರೆಗಳು 18.

ಶ್ರೀ ಜಿ. ಆರ್. ಹಾಲಸ್ವಾಮಿ.—ಎರಡನೆ ಪ್ರಶ್ನೆಗೆ ಯಾವುದೂ ಇಲ್ಲ ಎಂದು ಹೇಳಿದ್ದೀರಿ, ನಮ್ಮಾರು 3-4 ವರ್ಷಗಳಿಂದ 4-5 ಕೆರೆಗಳು ಎಸ್ಟಿಮೇಟು, ನರ್ಪಿನಡೆದದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀಮತಿ ಬನವರಾಜೇಶ್ವರಿ.—ನೀವು ಕೇಳಿರುವುದು ಎಸ್ಟಿಮೇಟ್ ಸ್ಟೇಜಿನಲ್ಲಿ ಇದೆಯೇ ಅಂತ, ಎಸ್ಟಿಮೇಟ್ ಸ್ಟೇಜಿನಲ್ಲಿ ಇಲ್ಲ, ಕೆಲವು ಪ್ರೋಗ್ರೆಸ್‌ನಲ್ಲಿ ಇವೆ. ಎರಡು ಮಾತ್ರ ಇನ್‌ವೆಸ್ಟಿಗೇಷನ್ ಸ್ಟೇಜಿನಲ್ಲಿ ಇವೆ.

ಶ್ರೀ ಜೆ. ಆರ್. ಹಾಲಸ್ವಾಮಿ.—ಎರಡು ವರ್ಷದ ಕೆಳಗೆ ಕಾನೂರು ಕಟ್ಟೆ ಕೆರೆ ಮುಂಜೂರು ಆಗಿದ್ದು ಹೈಕೋರ್ಟಿನಲ್ಲಿ ಡಿಸ್‌ಪ್ಯೂಟ್ ಆಗಿದೆ. ಅದನ್ನು ತೆಗೆದುಕೊಳ್ಳುವುದು ಪರಿಶೀಲನೆ ಯಲ್ಲಿದೆಯೇ ?

ಶ್ರೀಮತಿ ಬನವರಾಜೇಶ್ವರಿ.—ಮಾಗಡಿ ಮತ್ತು ಲಕ್ಕಂಪುರ ಕೆರೆ ಕೆಲಸ ಪ್ರಾರಂಭದಲ್ಲಿ ಇವೆ, ಕೆಲಸ ನಡೆಯುತ್ತಾ ಇದೆ. ಇನ್ನು ಉಜ್ಜಿಕೆರೆ, ತರಗನಹಳ್ಳಿ ಕೆರೆ ಇನ್‌ವೆಸ್ಟಿಗೇಷನ್ ಸ್ಟೇಜಿನಲ್ಲಿ ಇದೆ, ಬಾಕಿ ವಿಷಯ ಸರ್ಕಾರದ ಗಮನದಲ್ಲಿ ಇಲ್ಲ.

Electrification of Villages in Dharwar District

124. **Sri F. S. PATIL** (Kalghatgi),—

Will the Chief Minister be pleased to state :—

(*a*) the number of villages in Dharwar District that have been electrified from 1960 to end of March 1969 (Talukwar figures may please be furnished) ;

(*b*) the number of villages that were not electrified during the above period (Talukwar figures may please be given) ?

Sri D. PARAMESWARAPPA (Deputy Minister for Major Irrigation and Electricity [On behalf of SRI VEERENDRA PATIL (Chief Minister)].—

(*a*) 392 villages and 19 hamlets. Details showing in the statement is appended.

(*b*) 979 [Details in statement appended].

(SRI D. PARAMESWARAPPA)

STATEMENT

Statement showing the number of Villages electrified in Dharwar District between 1960 to end of 31st March 1969.

Dharwar District

Sl. No.	Taluk	No. of villages (1) Taluk-war as per 1961 census.	No. of Villages electrified between 1960 to March 1969.	Total No. of hamlets electrified.	Total No. of villages/ hamlets electrified.	No. of Villages yet to be electrified.
1	Byadgi ...	64	13	...	15	49
2	Dharwar ...	121	17	...	17	104
3	Gadag ...	55	34	2	36	19
4	Hangal ...	173	17	1	20	153
5	Haveri ...	123	30	4	34	89
6	Hirekerur ...	126	41	...	41	85
7	Hubli ...	56	23	1	25	31
8	Kalghatgi ...	85	20	1	21	64
9	Kundgol ...	58	17	...	18	40
10	Mundargi ...	52	16	...	16	36
11	Nargund ...	30	7	...	8	22
12	Navalgund ...	57	26	...	28	29
13	Ranebennur ...	106	51	4	61	45
14	Ron ...	91	28	5	34	57
15	Shiggaon ...	129	41	1	42	87
16	Shirahatti ...	81	11	...	12	69
		1,407	392	19	428	979

ಶ್ರೀ ಕೆ. ಎಚ್. ಪಾಟೀಲ್.—ಧಾರವಾಡ ಜಿಲ್ಲೆಯಲ್ಲಿ ಎಷ್ಟು ಗ್ರಾಮಗಳಿಗೆ ವಿದ್ಯುತ್ತನ್ನು ಒದಗಿಸಿದ್ದಾರೆಂಬುದಕ್ಕೆ ಇಲ್ಲಿ ಗ್ರಾಮಗಳ ಹೆಸರನ್ನು ಕೊಟ್ಟಿದ್ದಾರೆ. ಇಲ್ಲಿ ಸೂಚಿಸಿರತಕ್ಕ ಗ್ರಾಮಗಳಿಗೆ ವಿದ್ಯುತ್ ಸರಬರಾಯಿ ಮಾಡತಕ್ಕ ಕಾಲದಲ್ಲಿ ಮಧ್ಯ ದಾರಿಯಲ್ಲಿದ್ದ ಬೇರೆ ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸದೆ ಅವರಿಗೆ ಅಂದರೆ ಕಾಂಗ್ರೆಸ್ಸಿನವರಿಗೆ ಬೇಕಾಗಿದ್ದ ಗ್ರಾಮಗಳಿಗೆ ಮಾತ್ರ ಅನುಕೂಲಮಾಡಿಕೊಟ್ಟಿದ್ದಾರೆಂಬ ಅಪಾದನೆಯನ್ನು ದೂರಮಾಡಲು ಏನು ಕ್ರಮ ಕೈಗೊಂಡಿದ್ದಾರೆ

†Sri D. PARAMESWARAPPA.—When the villagers come forward we will take it up. When villagers of villages which are lying very near to the transmission line do not come forward we cannot help.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇಲ್ಲಿ ನೂಚಿಸಿರತಕ್ಕ 312 ಗ್ರಾಮ ಮತ್ತು 19 ಕೊಪ್ಪಲು ಗಳಿಗೂ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕೆ ಒಟ್ಟು ಖರ್ಚಾದ ಹಣವೆಷ್ಟು ? ಮತ್ತು ಇದೇ ದಾಮಾಷದಲ್ಲಿ ರಾಜ್ಯದಲ್ಲಿರತಕ್ಕ ಬೇರೆ ಜಿಲ್ಲೆಗಳಿಗೂ ವಿದ್ಯುಚ್ಛಕ್ತಿಯನ್ನು ಒದಗಿಸಲಾಗಿದೆಯೇ ? ಕೇವಲ 9 ವರ್ಷಗಳಲ್ಲಿ 1,400 ಗ್ರಾಮಗಳ ಪೈಕಿ 392 ಗ್ರಾಮಗಳಿಗೆ ವಿದ್ಯುತ್ತನ್ನು ಒದಗಿಸಲಾಗಿದೆ. ಇದೇ ದಾಮಾಷವನ್ನು ಬೇರೆ ಭಾಗಕ್ಕೂ ಅನ್ವಯಿಸಲಾಗಿದೆಯೇ ?

Sri D. PARAMESWARAPPA.—Dharwar District is an under-developed area so far as electrification is concerned. It has not come on par with old Mysore area ; in old Mysore area we have made certain progress in rural electrification programme. The programme may not be uniform in respect of all the districts ; it depends upon the allotment that we have made to each district in each year.

ಶ್ರೀ ಸಿದ್ದಯ್ಯ ಕಾಶೀಮಠ್.—ಈ ವರ್ಷ ಧಾರ್ವಾಡ ಜಿಲ್ಲೆಯಲ್ಲಿ ಎಷ್ಟು ಗ್ರಾಮಗಳಿಗೆ ವಿದ್ಯುತ್ತನ್ನು ಒದಗಿಸಬೇಕೆಂದಿದ್ದಾರೆ ?

Sri D. PARAMESWARAPPA.—During 1969-70 we proposed to electrify 50 villages.

ಶ್ರೀ ಎಸ್. ಎಸ್. ಪಾಟೀಲ್.—ಕಲ್ಘಟ್ಗಿ ತಾಲ್ಲೂಕಿನಲ್ಲಿ 85 ಹಳ್ಳಿಗಳಿದ್ದರೂ ಕೇವಲ 20 ಗ್ರಾಮಗಳಿಗೆ ಒದಗಿಸುವುದಕ್ಕೆ ಕಾರಣವೇನು ?

ಶ್ರೀ ಡಿ ಪರಮೇಶ್ವರಪ್ಪ.—ಅದಕ್ಕೆ ಕಾರಣವಿಷ್ಟೆ : ಕೆಲವು ಗ್ರಾಮಗಳವರು ವಿದ್ಯುಚ್ಛಕ್ತಿಯನ್ನು ಪಡೆಯಲು ಮುಂದೆ ಬರಲಿಲ್ಲ. ಮೇಲಾಗಿ ಈ ಕೆಲಸ ಎಷ್ಟು ಹಣದ ಪೂರೈಕೆ ಇದೆ ಎನ್ನುವುದರ ಮೇಲೆ ಹೋಗುತ್ತದೆ.

ಶ್ರೀ ನಡಾಶಿವಪ್ಪ ಪಾಟೀಲ್.—ಸರ್ಕಾರದವರು ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಕೊಡತಕ್ಕ ಕಾಲದಲ್ಲಿ ಗ್ರಾಮಗಳಲ್ಲರತಕ್ಕ ಜನಸಂಖ್ಯೆ ಅಥವಾ ಅವುಗಳೇನು ಹಿಂದುಳಿದ ಪ್ರದೇಶದಲ್ಲವೆಯೇ ಎಂಬುದನ್ನು ನೋಡಿ ಒದಗಿಸರಾಗುತ್ತದೋ ಅಥವಾ ಕಾಂಗ್ರೆಸ್ಸಿನವರಿಗೆ ಬೇಕಾದವರು ಯಾರು ಎಂಬುದನ್ನು ನೋಡಿ ಕೊಡುತ್ತಾರೋ ? ಹಾಗೆ ಅವರಿಗೆ ಬೇಕಾದವರಿಗೆ ಕೊಟ್ಟು ಅವರಿಗೆ ಹಣವನ್ನು ಕಟ್ಟತಕ್ಕ ಶಕ್ತಿಯಿಲ್ಲದೆ ಅದನ್ನು ಕೈಬಿಟ್ಟಿರುವುದೂ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಡಿ. ಪರಮೇಶ್ವರಪ್ಪ.—ಆಯಾಯ ಜಿಲ್ಲೆಯಲ್ಲ ಮತ್ತು ತಾಲ್ಲೂಕುಗಳಲ್ಲರತಕ್ಕ ಶಾಸನ ಸಭಾ ಸದಸ್ಯರ ಪಿಟಿಂಗನ್ನು ಮಾಡಿ ಅವರ ಅಭಿಪ್ರಾಯದ ಪ್ರಕಾರ ಇದನ್ನು ಒದಗಿಸಲಾಗುತ್ತಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ —ನಾನು ಈ 428 ಗ್ರಾಮಗಳಿಗೆ ವಿದ್ಯುತ್ತನ್ನು ಒದಗಿಸುವುದಕ್ಕೆ ಖರ್ಚಾದ ಮೊಬಲಗೆಷ್ಟು ಎಂದು ಪ್ರಶ್ನೆ ಕೇಳಿದ್ದಕ್ಕೆ ಉತ್ತರ ಬರಲಿಲ್ಲ.

ಶ್ರೀ ಡಿ. ಪರಮೇಶ್ವರಪ್ಪ.—ಅದಕ್ಕೆ ಮಾನ್ಯ ಸದಸ್ಯರು ಪ್ರತ್ಯೇಕ ಪ್ರಶ್ನೆಯನ್ನು ಕಳುಹಿಸಿದರೆ ಉತ್ತರವನ್ನು ಒದಗಿಸಲಾಗುತ್ತದೆ.

Cases relating to smuggling of foodgrains in Mangalore Food Division

159. Sri B. M. IDINABBA (Mangalore).—

Will the Minister of State for Food and Civil Supplies be pleased to state :—

(*a*) the number of cases relating to the smuggling of foodgrains filed by the police during the year 1967-68 in Mangalore Food Division ;